**ಕರ್ನಾಟಕ ವಿಧಾನಸಭೆ**

**ಹದಿನೈದನೇ ವಿಧಾನಸಭೆ**

**ಹನ್ನೊಂದನೇ ಅಧಿವೇಶನ**

# ಕರ್ನಾಟಕ ನಗರಪಾಲಿಕೆಗಳ ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ವಿಧೇಯಕ, 2021

**(2021ರ ವಿಧಾನಸಭೆಯ ವಿಧೇಯಕ ಸಂಖ್ಯೆ–41)**

ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ 1976 ಮತ್ತು ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14) ಮತ್ತು ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22) ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ನಗರಪಾಲಿಕೆಗಳ ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ಅಧಿನಿಯಮ, 2021 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 1977ರ ಕರ್ನಾಟಕ ಅಧಿನಿಯಮ 14ರ ತಿದ್ದುಪಡಿ.-** ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14) ರಲ್ಲಿ,-

(i) 108ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿನ (ಸಿ) ಖಂಡದಲ್ಲಿ "–ವಿಧಿಸತಕ್ಕದ್ದು." ಎಂಬ ಚಿಹ್ನೆ, ಪೂರ್ಣವಿರಾಮ ಮತ್ತು ಪದದ ಬದಲಾಗಿ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಡಿ) ಕೈಗಾರಿಕೆ ಕಟ್ಟಡಗಳ ಸಂಬಂಧದಲ್ಲಿ (ಎ) ಖಂಡದ ಅನುಸಾರವಾಗಿ ವಾಣಿಜ್ಯ ಕಟ್ಟಡಗಳ ಸಂದರ್ಭದಲ್ಲಿ ವಿಧಿಸಿದ ದರದ ಶೇಕಡಾ ಎಪ್ಪತ್ತಕ್ಕಿಂತ ಕಡಿಮೆಯಲ್ಲದಂಥ ಶೇಕಡಾವಾರು ಪ್ರಮಾಣದಲ್ಲಿ,

–ವಿಧಿಸತಕ್ಕದ್ದು:

ಪರಂತು, ಹಾಗೆ ನಿಗದಿಪಡಿಸಿದ ಶೇಕಡಾವಾರು ದರವು, (ಬಿ) ಖಂಡದ ಅನುಸಾರವಾಗಿ ವಾಣಿಜ್ಯ ಕಟ್ಟಡಗಳನ್ನು ಹೊರತುಪಡಿಸಿ ವಸತಿ ಕಟ್ಟಡಗಳು ಮತ್ತು ಕಟ್ಟಡಗಳ ಸಂದರ್ಭದಲ್ಲಿ ವಿಧಿಸಿದ ದರಕ್ಕಿಂತ ಕಡಿಮೆ ಇರತಕ್ಕದ್ದಲ್ಲ."

(ii) 110ನೇ ಪ್ರಕರಣದಲ್ಲಿ (1)ನೇ ಉಪಪ್ರಕರಣದಲ್ಲಿ,-

(ಎ) (ಜೆ) ಖಂಡದಲ್ಲಿ "ವಾಣಿಜ್ಯ" ಎಂಬ ಪದದ ತರುವಾಯ "ಅಥವಾ ಕೈಗಾರಿಕೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) ಎರಡನೇ ಪರಂತುಕದಲ್ಲಿ, "ವಾಣಿಜ್ಯ" ಎಂಬ ಪದದ ತರುವಾಯ "ಅಥವಾ ಕೈಗಾರಿಕೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

**3. 1964ರ ಕರ್ನಾಟಕ ಅಧಿನಿಯಮ 22ರ ತಿದ್ದುಪಡಿ.-** ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22) ರಲ್ಲಿ,-

(i) 94ನೇ ಪ್ರಕರಣದಲ್ಲಿನ (1-ಎ) ಉಪಪ್ರಕರಣದಲ್ಲಿ,-

(ಎ) (ಜೆ) ಖಂಡದಲ್ಲಿ "ವಾಣಿಜ್ಯ" ಎಂಬ ಪದದ ತರುವಾಯ "ಅಥವಾ ಕೈಗಾರಿಕೆ" ಎಂಬ ಪದಗಳನ್ನು ಸೇರಿಸತಕ್ಕದ್ದು; ಮತ್ತು

(ಬಿ) ಎರಡನೇ ಪರಂತುಕದಲ್ಲಿ, "ವಾಣಿಜ್ಯ" ಎಂಬ ಪದದ ತರುವಾಯ "ಅಥವಾ ಕೈಗಾರಿಕೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) 101ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ (ಸಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಡಿ) ತೆರಿಗೆಗೆ ಗುರಿಯಾಗತಕ್ಕ ಕಟ್ಟಡದ ಮೂಲ ಬೆಲೆಯ (2)ನೇ ಉಪಪ್ರಕರಣದ (ಎ) ಖಂಡದ ಅನುಸಾರವಾಗಿ ವಾಣಿಜ್ಯ ಕಟ್ಟಡದ ಸಂದರ್ಭದಲ್ಲಿ ವಿಧಿಸಿದ ದರದ ಶೇಕಡಾ ಎಪ್ಪತ್ತಕ್ಕಿಂತ ಕಡಿಮೆಯಲ್ಲದಂಥ ಶೇಕಡಾವಾರಿನಂತೆ,

–ವಿಧಿಸತಕ್ಕದ್ದು:

ಪರಂತು, ಹಾಗೆ ನಿಗದಿಪಡಿಸಿದ ಶೇಕಡಾವಾರು ದರವು, (ಬಿ) ಖಂಡದ ಅನುಸಾರವಾಗಿ ವಾಣಿಜ್ಯ ಕಟ್ಟಡಗಳನ್ನು ಹೊರತುಪಡಿಸಿ ವಸತಿ ಕಟ್ಟಡಗಳು ಮತ್ತು ಕಟ್ಟಡಗಳ ಸಂದರ್ಭದಲ್ಲಿ ವಿಧಿಸಲಾದ ದರಕ್ಕಿಂತ ಕಡಿಮೆ ಇರತಕ್ಕದ್ದಲ್ಲ.."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ರಾಜ್ಯದಲ್ಲಿ ಕೈಗಾರಿಕೆಗಳ ಸ್ಥಾಪನೆಯನ್ನು ಉತ್ತೇಜಿಸುವುದಕ್ಕೆ ಪಾಲಿಕೆಗಳು ಮತ್ತು ಇತರ ನಗರ ಸ್ಥಳೀಯ ನಿಕಾಯಗಳಲ್ಲಿ ಕೈಗಾರಿಕಾ ಕಟ್ಟಡಗಳಿಗೆ ವಿಧಿಸಬೇಕಾದ ಸ್ವತ್ತು ತೆರಿಗೆ ಪ್ರತ್ಯೇಕ ದರವನ್ನು ನಿರ್ದಿಷ್ಟಪಡಿಸಲು, 2021-22ರ ಆಯವ್ಯಯ ಭಾಷಣದಲ್ಲಿ ಮಾಡಲಾದ ಪ್ರಸ್ತಾವನೆಯನ್ನು ಜಾರಿಗೊಳಿಸಲು ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ನ್ನು ಮತ್ತು ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22) ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಸ್ವತ್ತು ತೆರಿಗೆಯ ಬೇಡಿಕೆಯನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಲಾಗಿದ್ದು, ಅದನ್ನು ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಜಿಸುವ ಹಾಗೂ ಆರ್ಥಿಕ ಬೆಳವಣಿಗೆಯಲ್ಲಿ ಉತ್ತೇಜನ ನೀಡುವ ಮೂಲಕ ಆದಾಯ ಹೆಚ್ಚಿಸುವುದಕ್ಕೆ ಕಾರಣವಾಗಿಸಿ, ಆ ಮೂಲಕ ಸ್ವತ್ತು ತೆರಿಗೆ ಬೇಡಿಕೆಯನ್ನು ಹೆಚ್ಚಿಸುವುದಕ್ಕೆ ಪ್ರಾಮುಖ್ಯತೆ ನೀಡುವ ಮುಖೇನ ಸರಿದೂಗಿಸತಕ್ಕದ್ದು.

**ಬಿ.ಎ. ಬಸವರಾಜ**
ನಗರಾಭಿವೃದ್ಧಿ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನ ಸಭೆ

**ಅನುಬಂಧ**

**ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976**

**(1977ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ರ ಉದ್ಧೃತ ಭಾಗ**

**XX XX XX**

**108. ಸ್ವತ್ತು ತೆರಿಗೆಯ ವಿವರಣೆ ಮತ್ತು ವರ್ಗ.- XX XX XX**

(2) ಸ್ವತ್ತು ತೆರಿಗೆಯನ್ನು,-

(ಎ) ವಾಣಿಜ್ಯ ಕಟ್ಟಡಗಳ ಸಂಬಂಧದಲ್ಲಿ ತೆರಿಗೆಗೆ ಗುರಿಯಾಗತಕ್ಕ ಭೂಮಿಸಹಿತವಾದ ಕಟ್ಟಡದ ಬಂಡವಾಳ ಮೌಲ್ಯದ ಶೇಕಡಾ 0.5ಕ್ಕಿಂತ (ಒಂದು ಸಾವಿರಕ್ಕೆ ಐದು ರೂಪಾಯಿಗಳು) ಕಡಿಮೆ ಇಲ್ಲದಂಥ ಮತ್ತು ಶೇಕಡಾ ಮೂರಕ್ಕಿಂತ ಹೆಚ್ಚಿಲ್ಲದಂಥ ಶೇಕಡಾ ಪ್ರಮಾಣದಲ್ಲಿ;

(ಬಿ) ವಾಸದ ಕಟ್ಟಡ ಮತ್ತು ವಾಣಿಜ್ಯೇತರ ಕಟ್ಟಡಗಳ ಸಂಬಂಧದಲ್ಲಿ ತೆರಿಗೆಗೆ ಗುರಿಯಾಗತಕ್ಕ, ಭೂಮಿಸಹಿತವಾದ ಕಟ್ಟಡದ ಬಂಡವಾಳ ಮೌಲ್ಯದ ಶೇಕಡಾ 1.5ಕ್ಕಿಂತ (ಒಂದು ಸಾವಿರಕ್ಕೆ ಹದಿನೈದು ರೂಪಾಯಿಗಳು) ಹೆಚ್ಚಿಲ್ಲದಂಥ ಶೇಕಡಾ ಪ್ರಮಾಣದಲ್ಲಿ;

(ಸಿ) ಖಾಲಿ ಭೂಮಿಯ ಸಂಬಂಧದಲ್ಲಿ ತೆರಿಗೆಗೆ ಗುರಿಯಾಗತಕ್ಕ ಭೂಮಿಯ ಬಂಡವಾಳ ಮೌಲ್ಯದ ಶೇಕಡಾ 0.2 ಕ್ಕಿಂತ (ಒಂದು ಸಾವಿರಕ್ಕೆ ಎರಡು ರೂಪಾಯಿಗಳು) ಕಡಿಮೆ ಇಲ್ಲದ ಮತ್ತು ಶೇಕಡಾ 0.5ಕ್ಕಿಂತ (ಒಂದು ಸಾವಿರಕ್ಕೆ ಐದು ರೂಪಾಯಿಗಳು) ಹೆಚ್ಚಿಲ್ಲದಂಥ ಶೇಕಡಾ ಪ್ರಮಾಣದಲ್ಲಿ,

- ವಿಧಿಸತಕ್ಕದ್ದು.

**XX XX XX**

**110. ಸಾಮಾನ್ಯ ವಿನಾಯತಿ.-** (1) ಈ ಕೆಳಕಂಡ ಕಟ್ಟಡಗಳಿಗೆ ಮತ್ತು ಭೂಮಿಗಳಿಗೆ ಸ್ವತ್ತು ತೆರಿಗೆಯಿಂದ ವಿನಾಯಿತಿ ನೀಡತಕ್ಕದ್ದು:-

(ಎ) ಸಾರ್ವಜನಿಕ ಆರಾಧನೆಗಾಗಿ ಪ್ರತ್ಯೇಕವಾಗಿಟ್ಟ ಮತ್ತು ಹಾಗೆ ವಾಸ್ತವವಾಗಿ ಬಳಸುತ್ತಿರುವ ಅಥವಾ ಯಾವ ಇತರ ಉದ್ದೇಶಗಳಿಗೂ ಬಳಸದಿರುವ ಸ್ಥಳಗಳು;

(ಬಿ) ಯಾವ ಛತ್ರಗಳಲ್ಲಿ ಇರುವುದಕ್ಕಾಗಿ ಬಾಡಿಗೆಯನ್ನು ವಿಧಿಸುವುದಿಲ್ಲವೋ ಆ ಛತ್ರಗಳು ಮತ್ತು ಯಾವ ಛತ್ರಗಳಲ್ಲಿ ಇರುವುದಕ್ಕಾಗಿ ವಿಧಿಸಿದ ಬಾಡಿಗೆಯನ್ನು ಧರ್ಮಾರ್ಥ ಉದ್ದೇಶಗಳಿಗಾಗಿ ಬಳಸಲಾಗುತ್ತಿದೆಯೋ ಆ ಛತ್ರಗಳು;

(ಸಿ) ನಿರಾಶ್ರಿತರಿಗೆ ಅಥವಾ ಪ್ರಾಣಿಗಳಿಗೆ ಆಶ್ರಯ ಕೊಡುವ ಧರ್ಮಾರ್ಥ ಉದ್ದೇಶಕ್ಕಾಗಿ ಬಳಸುತ್ತಿರುವ ಸ್ಥಳಗಳು ಮತ್ತು ಅನಾಥಾಲಯಗಳು, ಕಿವುಡರು ಮತ್ತು ಮೂಕರಿಗಾಗಿ ಗೃಹಗಳು ಮತ್ತು ಶಾಲೆಗಳು, ವೃದ್ಧರಿಗೆ ಮತ್ತು ಪತಿತ ಮಹಿಳೆಯರಿಗಾಗಿ ಆಶ್ರಮಗಳು ಮತ್ತು ಸರ್ಕಾರವು ಅನುಮೋದಿಸಿದಂಥ ಲೋಕೋಪಕಾರಿ ರೀತಿಯಲ್ಲಿ ನಡೆಸಲಾಗುತ್ತಿರುವ ಅದೇ ರೀತಿಯ ಸಂಸ್ಥೆಗಳು;

(ಡಿ) 1961ರ ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮದ ಮತ್ತು 1958ರ ಪ್ರಾಚೀನ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮದ (1958ರ ಕೇಂದ್ರ ಅಧಿನಿಯಮ 24) ಮೇರೆಗೆ ಸಂರಕ್ಷಿತವಾದಂಥ ಪ್ರಾಚೀನ ಸ್ಮಾರಕಗಳು ಅಥವಾ ವಾಸದ ಗೃಹಗಳಾಗಿ ಅಥವಾ ಸರ್ಕಾರಿ ಕಛೇರಿಗಳಾಗಿ ಬಳಸದೇ ಇರುವ ಅವುಗಳ ಭಾಗಗಳು;

(ಇ) ಧರ್ಮಾರ್ಥ ಆಸ್ಪತ್ರೆಗಳು ಮತ್ತು ಔಷಧಾಲಯಗಳು, ಆದರೆ ಅವುಗಳಿಗೆ ಲಗತ್ತಾದ ವಾಸಗೃಹಗಳು ಒಳಗೊಳ್ಳುವುದಿಲ್ಲ;

(ಎಫ್) ಕಾಲಕಾಲಕ್ಕೆ ಸರ್ಕಾರವು ಅಧಿಸೂಚಿಸಬಹುದಾದ ರೈಲ್ವೆ ಆಡಳಿತಗಳು ನಿರ್ವಹಿಸುತ್ತಿರುವಂಥ ಆಸ್ಪತ್ರೆಗಳು ಮತ್ತು ಔಷಧಾಲಯಗಳು, ಆದರೆ ಅವುಗಳಿಗೆ ಲಗತ್ತಾದ ವಾಸಗೃಹಗಳು ಒಳಗೊಳ್ಳುವುದಿಲ್ಲ;

(ಜಿ) 394ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಆಯುಕ್ತರು ಪ್ರಕಟಿಸಿದ ಪಟ್ಟಿಯಲ್ಲಿ ಸೇರಿರುವ ಸ್ಮಶಾನ ಮತ್ತು ಸುಡುಗಾಡುಗಳು;

(ಹೆಚ್) ಉಚಿತ ಮನೋರಂಜನಾ ಉದ್ದೇಶಗಳಿಗಾಗಿ ಪ್ರತ್ಯೇಕವಾಗಿಟ್ಟ ಸರ್ಕಾರಿ ಭೂಮಿಗಳು ಮತ್ತು ಯಾವ ಸರ್ಕಾರಿ ಭೂಮಿಯಿಂದ ಯಾವುದೇ ಆದಾಯ ಬರುವುದಿಲ್ಲವೆಂದು ಸರ್ಕಾರವು ಅಭಿಪ್ರಾಯಪಟ್ಟು, ಅಧಿಸೂಚಿಸಬಹುದೋ ಅಂಥ ಎಲ್ಲ ಇತರ ಸರ್ಕಾರಿ ಭೂಮಿಗಳು;

(ಐ) (ಎ) ಲಾಭಕ್ಕಾಗಿ ಸ್ಥಾಪಿಸಿರದ ಅಥವಾ ನಡೆಸದಿರುವ ವಿದ್ಯಾರ್ಥಿ ನಿಲಯಗಳಿಗಾಗಿ,

(ಬಿ) ಮನ್ನಣೆ ಪಡೆದ ಶೈಕ್ಷಣಿಕ ಸಂಸ್ಥೆಗಳು ಶೈಕ್ಷಣಿಕ ಉದ್ದೇಶಗಳಿಗಾಗಿ,

(ಸಿ) 1926ರ ಕಾರ್ಮಿಕ ಸಂಘಗಳ ಅಧಿನಿಯಮದ ಮೇರೆಗೆ ನೋಂದಾಯಿತವಾದ ಕಾರ್ಮಿಕ ಸಂಘಗಳಿಗಾಗಿ ಮತ್ತು ಅಂಥ ಸಂಘಕ್ಕೆ ಸೇರಿದ ಕಛೇರಿಗಳಿಗಾಗಿ

- ಅನನ್ಯವಾಗಿ ಬಳಸುತ್ತಿರುವ ಕಟ್ಟಡ ಅಥವಾ ಭೂಮಿಗಳು;

(ಜೆ) ಸರ್ಕಾರದ ಉದ್ದೇಶಗಳಿಗಾಗಿ ಬಳಸುತ್ತಿರುವ ಮತ್ತು ವಸತಿ ಅಥವಾ ವಾಣಿಜ್ಯ ಉದ್ದೇಶಗಳಿಗಾಗಿ ಬಳಸದಿರುವ ಅಥವಾ ಬಳಸಲು ಉದ್ದೇಶಿಸದಿರುವ, ಕೇಂದ್ರ ಸರ್ಕಾರಕ್ಕೆ ಅಥವಾ ಯಾವುದೇ ರಾಜ್ಯಸರ್ಕಾರಕ್ಕೆ ಸೇರಿದ ಕಟ್ಟಡಗಳು ಅಥವಾ ಭೂಮಿಗಳು;

(ಕೆ) ಯಾವುದೇ ಮಂಜೂರಾತಿಗೆ, ಹಂಚಿಕೆಗೆ ಅಥವಾ ಗುತ್ತಿಗೆಗೆ ಅನುಸಾರವಾಗಿ ಯಾರೇ ವ್ಯಕ್ತಿಗೆ, ಯಾವ ಕಟ್ಟಡಗಳ ಅಥವಾ ಭೂಮಿಗಳ ಸ್ವಾಧೀನವನ್ನು ಒಪ್ಪಿಸಿಲ್ಲವೋ, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987 ರ ಮೇರೆಗೆ ರಚಿಸಿದ ಯಾವುದೇ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ, ಕರ್ನಾಟಕ ಗೃಹಮಂಡಲಿಗೆ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಸೇರಿರುವ ಆ ಕಟ್ಟಡಗಳು ಅಥವಾ ಭೂಮಿಗಳು;

(ಎಲ್) ಸರ್ಕಾರದ ರೆವಿನ್ಯೂ ಲೆಕ್ಕಗಳಲ್ಲಿ ಕೃಷಿ ಉದ್ದೇಶಗಳಿಗಾಗಿ ಬಳಸುತ್ತಿರುವ ಭೂಮಿಯೆಂದು ನೋಂದಾಯಿತವಾಗಿರುವ ಮತ್ತು ಬೆಳೆಗಳ ಸಾಗುವಳಿಗಾಗಿ ವಾಸ್ತವವಾಗಿ ಬಳಸುತ್ತಿರುವ ಭೂಮಿ:

ಪರಂತು, (ಎ), (ಸಿ) ಮತ್ತು (ಇ) ಖಂಡಗಳಲ್ಲಿ ಒಳಗೊಂಡಿರುವುದು ಯಾವುದೂ, ಯಾವ ಕಟ್ಟಡಕ್ಕೆ ಅಥವಾ ಖಾಲಿ ಭೂಮಿಗೆ ಯಾವ ವ್ಯಕ್ತಿಯು ಬಾಡಿಗೆ ಸಂದಾಯ ಮಾಡಬೇಕಾಗಿದೆಯೋ ಅಥವಾ ಸದರಿ ಖಂಡಗಳಲ್ಲಿ ಉಲ್ಲೇಖಿಸಿರುವ ಉದ್ದೇಶಗಳಿಗಾಗಿ, ಅದನ್ನು ಯಾವ ವ್ಯಕ್ತಿಯು ಬಳಸುತ್ತಿರುವನೋ ಆ ಕಟ್ಟಡಕ್ಕೆ ಅಥವಾ ಖಾಲಿ ಭೂಮಿಗೆ, ಸ್ವತ್ತು ತೆರಿಗೆಯಿಂದ ವಿನಾಯಿತಿ ನೀಡಿದೆ ಎಂದು ಭಾವಿಸತಕ್ಕದ್ದಲ್ಲ:

ಮತ್ತೂ ಪರಂತು, (ಜೆ) ಖಂಡದ ಉದ್ದೇಶಕ್ಕಾಗಿ, ಯಾವುದೇ ಕಟ್ಟಡವನ್ನು ಅಥವಾ ಖಾಲಿ ಭೂಮಿಯನ್ನು ಸರ್ಕಾರದ ಉದ್ದೇಶಗಳಿಗಾಗಿ ಬಳಸಲಾಗುತ್ತಿದೆಯೇ ಹೊರತು ವಸತಿಯ ಅಥವಾ ವಾಣಿಜ್ಯ ಉದ್ದೇಶಗಳಿಗಾಗಿ ಬಳಸುತ್ತಿಲ್ಲ ಅಥವಾ ಬಳಸಲು ಉದ್ದೇಶಿಸಿಲ್ಲ ಎಂದು ಸರ್ಕಾರವು ಅಥವಾ ಸರ್ಕಾರದಿಂದ ಕ್ರಮಬದ್ಧವಾಗಿ ಅಧಿಕೃತನಾದ ಯಾರೇ ಅಧಿಕಾರಿಯು ನೀಡಿದ ಪ್ರಮಾಣಪತ್ರಕ್ಕೆ ನಗರಪಾಲಿಕೆಯು ಬದ್ಧವಾಗಿರತಕ್ಕದ್ದು.

**XX** **XX** **XX**

**ಕರ್ನಾಟಕ ಪೌರಸಭೆಗಳ ಅಧಿನಿಯಮ, 1964**

**(1964ರ ಕರ್ನಾಟಕ ಅಧಿನಿಯಮ ಸಂಖ್ಯೆ 22) ರ ಉದ್ಧೃತ ಭಾಗ**

**XX XX XX**

**94. ವಿಧಿಸಬಹುದಾದ ತೆರಿಗೆಗಳು.- XX XX XX**

(1-ಎ) ಈ ಮುಂದಿನ ಕಟ್ಟಡಗಳು ಹಾಗೂ ಖಾಲಿ ಭೂಮಿಗಳನ್ನು ಸ್ವತ್ತು ತೆರಿಗೆಯಿಂದ ವಿನಾಯಿತಿಗೊಳಿಸತಕ್ಕದ್ದು, ಎಂದರೆ:-

(ಎ) ಸಾರ್ವಜನಿಕ ಪೂಜಾ ಸ್ಥಳವಾಗಿ ತೆಗೆದಿರಿಸಿದ ಹಾಗೂ ಹಾಗೆ ವಾಸ್ತವಾವಿಕವಾಗಿ ಬಳಸಲಾಗುತ್ತಿರುವ ಅಥವಾ ಯಾವುದೇ ಇತರ ಉದ್ದೇಶಗಳಿಗಾಗಿ ಉಪಯೋಗಿಸಿಲ್ಲದೇ ಇರುವ ಸ್ಥಳಗಳು;

(ಬಿ) ಉಪಯೋಗಿಸಿದ್ದಕ್ಕಾಗಿ ಬಾಡಿಗೆಯನ್ನು ವಿಧಿಸದ ಛತ್ರಗಳು ಹಾಗೂ ಉಪಯೋಗಿಸಿದ್ದಕ್ಕಾಗಿ ವಿಧಿಸಲಾದ ಬಾಡಿಗೆಯನ್ನು ಧರ್ಮಾರ್ಥ ಉದ್ದೇಶಕ್ಕಾಗಿ ಮಾತ್ರ ಬಳಸುವ ಛತ್ರಗಳು;

(ಸಿ) ನಿರ್ಗತಿಕರಿಗೆ ಅಥವಾ ಪ್ರಾಣಿಗಳಿಗೆ ಆಶ್ರಯ ನೀಡುವ ಧರ್ಮಾರ್ಥ ಉದ್ದೇಶಕ್ಕಾಗಿ ಬಳಸುವ ಸ್ಥಳಗಳು ಮತ್ತು ಅನಾಥಾಶ್ರಮಗಳು, ಕಿವುಡರು ಮತ್ತು ಮೂಖರಿಗಾಗಿ ಇರುವ ನಿಲಯಗಳು ಹಾಗೂ ಶಾಲೆಗಳು, ವೃದ್ಧರು ಹಾಗೂ ನಿರ್ಗತಿಕ ಮಹಿಳೆಯರಿಗಾಗಿನ ಆಶ್ರಯ ತಾಣಗಳು ಮತ್ತು ರಾಜ್ಯ ಸರ್ಕಾರದಿಂದ ಅಂಗೀಕೃತವಾದ, ಸಂಪೂರ್ಣವಾಗಿ ಜನೋಪಕಾರಿ ಉದ್ದೇಶದಿಂದ ನಡೆಸುತ್ತಿರುವ ಸಂಸ್ಥೆಗಳು;

(ಡಿ) ವಾಸಗೃಹಗಳು ಅಥವಾ ಸಾರ್ವಜನಿಕ ಕಛೇರಿಗಳಿಗಾಗಿ ಬಳಸದ ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಹಾಗೂ ಅವಶೇಷಗಳ ಅಧಿನಿಯಮ, 1961 ( 1962ರ ಕರ್ನಾಟಕ ಅಧಿನಿಯಮ ಸಂಖ್ಯೆ 7) ಹಾಗೂ ಪ್ರಾಚೀನ ಸ್ಮಾರಕ ಮತ್ತು ಪುರಾತತ್ವ ಮತ್ತು ಅವಶೇಷಗಳ ಅಧಿನಿಯಮ, 1958 ( 1958ರ ಕೇಂದ್ರ ಅಧಿನಿಯಮ 24)ರ ಅಡಿಯಲ್ಲಿ ರಕ್ಷಿತವಾದಂಥ ಪ್ರಾಚೀನ ಸ್ಮಾರಕಗಳು ಅಥವಾ ಅದರ ಭಾಗಗಳು;

(ಇ) ಧರ್ಮಾರ್ಥ ಆಸ್ಪತ್ರೆಗಳು ಮತ್ತು ಔಷಧಾಲಯಗಳು, ಆದರೆ ಅವುಗಳಿಗೆ ಹೊಂದಿಕೊಂಡಿರುವ ವಾಸದ ಗೃಹಗಳನ್ನು ಒಳಗೊಳ್ಳುವುದಿಲ್ಲ;

(ಎಫ್) ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂಥ, ರೈಲ್ವೆ ಆಡಳಿತವು ನಿರ್ವಹಿಸುತ್ತಿರುವ ಅಂಥ ಆಸ್ಪತ್ರೆಗಳು ಮತ್ತು ಔಷಧಾಲಯಗಳು; ಆದರೆ, ಅವುಗಳಿಗೆ ಹೊಂದಿಕೊಂಡಿರುವ ವಸತಿ ಗೃಹಗಳನ್ನು ಒಳಗೊಳ್ಳುವುದಿಲ್ಲ;

(ಜಿ) ಪುರಸಭೆಯ ಆಯುಕ್ತರು ಅಥವಾ ಮುಖ್ಯಾಧಿಕಾರಿಯು ಪ್ರಕಟಿಸಿದ ಪಟ್ಟಿಯಲ್ಲಿ ಸೇರಿಸಿರುವ ಸ್ಮಶಾನ ಮತ್ತು ದಹನಭೂಮಿ;

(ಹೆಚ್) ಉಚಿತ ಮನೋರಂಜನಾ ಉದ್ದೇಶಗಳಿಗಾಗಿ ಮೀಸಲಿಟ್ಟಿರುವ ಸರ್ಕಾರಿ ಭೂಮಿ ಮತ್ತು ಸರ್ಕಾರವು ಅಧಿಸೂಚಿಸಬಹುದಾದಂಥ, ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಯಾವುದೇ ಆದಾಯ ದೊರಕದಂಥ ಇತರ ಸರ್ಕಾರಿ ಭೂಮಿ;

(ಐ) (i) ಲಾಭಕ್ಕಾಗಿ ಸ್ಥಾಪಿಸದಿರುವ ಅಥವಾ ನಡೆಸದಿರುವ

(ii) ವಿದ್ಯಾರ್ಥಿ/ವಿದ್ಯಾರ್ಥಿನಿಲಯಗಳಿಗಾಗಿ

(iii) ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಿಂದ ಶೈಕ್ಷಣಿಕ ಉದ್ದೇಶಗಳಿಗಾಗಿ ಮಾತ್ರವೇ

ಬಳಸುತ್ತಿರುವ ಕಟ್ಟಡಗಳು ಮತ್ತು ಖಾಲಿ ಭೂಮಿಗಳು.

(ಜೆ) ಸರ್ಕಾರಿ ಉದ್ದೇಶಗಳಿಗಾಗಿ ಬಳಸುವ ಮತ್ತು ವಾಸದ ಅಥವಾ ವಾಣಿಜ್ಯ ಉದ್ದೇಶಗಳಿಗಾಗಿ ಬಳಸದ ಅಥವಾ ಬಳಸುವ ಉದ್ದೇಶವನ್ನು ಹೊಂದಿಲ್ಲದ, ಕೇಂದ್ರ ಸರ್ಕಾರಕ್ಕೆ ಅಥವಾ ಯಾವುದೇ ರಾಜ್ಯ ಸರ್ಕಾರಕ್ಕೆ ಸೇರಿದ ಕಟ್ಟಡಗಳು ಅಥವಾ ಖಾಲಿಭೂಮಿಗಳು;

(ಕೆ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗೃಹ ಮಂಡಳಿ, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987ರ ಅಡಿಯಲ್ಲಿ ರಚಿತವಾದ ನಗರಾಭಿವೃದ್ಧಿ ಪ್ರಾಧಿಕಾರಗಳು ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರಗಳಿಗೆ ಸೇರಿದ, ಆದರೆ ಯಾವುದೇ ಮಂಜೂರಾತಿ, ಹಂಚಿಕೆ ಅಥವಾ ಗುತ್ತಿಗೆಗೆ ಅನುಗುಣವಾಗಿ ಯಾವೊಬ್ಬ ವ್ಯಕ್ತಿಗೆ ಸ್ವಾದೀನತೆಯನ್ನು ವಹಿಸಿಕೊಟ್ಟಿರದ ಕಟ್ಟಡಗಳು ಮತ್ತು ಖಾಲಿಭೂಮಿಗಳು;

(ಎಲ್) ರಾಜ್ಯ ಸರ್ಕಾರದ ರಾಜಸ್ವ ಲೆಕ್ಕಪತ್ರಗಳಲ್ಲಿ ಕೃಷಿಯ ಉದ್ದೇಶಕ್ಕಾಗಿ ಬಳಸಲಾಗುವ ಭೂಮಿಯೆಂದು ನೋಂದಾಯಿತವಾದ ಮತ್ತು ವಾಸ್ತವಿಕವಾಗಿ ಬೆಳೆಯನ್ನು ಬೆಳೆಯುವ ಉದ್ದೇಶಕ್ಕಾಗಿ ಬಳಸುತ್ತಿರುವ ಭೂಮಿ.

ಪರಂತು, (ಎ), (ಸಿ) ಮತ್ತು (ಇ) ಖಂಡಗಳಲ್ಲಿ ಒಳಗೊಂಡಿರುವುದಾದರೂ, ಸದರಿ ಖಂಡಗಳಲ್ಲಿ ಉಲ್ಲೇಖಿಸಿದ ಉದ್ದೇಶಗಳಿಗಾಗಿ ಯಾವುದೇ ಕಟ್ಟಡ ಅಥವಾ ಖಾಲಿ ಭೂಮಿಯನ್ನು ಬಳಸುವ ವ್ಯಕ್ತಿ ಅಥವಾ ವ್ಯಕ್ತಿಗಳು ಬಾಡಿಗೆಯನ್ನು ಸಂದಾಯ ಮಾಡುತ್ತಿದ್ದರೆ, ಆ ಕಟ್ಟಡ ಅಥಾವ ಖಾಲಿಭೂಮಿಗೆ ಸ್ವತ್ತು ತೆರಿಗೆಯಿಂದ ವಿನಾಯಿತಿ ನೀಡುವುದಾಗಿ ಭಾವಿಸತಕ್ಕದ್ದಲ್ಲ.

ಮತ್ತೂ ಪರಂತು, (ಜೆ) ಖಂಡದ ಉದ್ದೇಶಗಳಿಗಾಗಿ, ಸರ್ಕಾರ ಅಥವಾ ಸರ್ಕಾರದಿಂದ ಕ್ರಮಬದ್ಧವಾಗಿ ಪ್ರಾಧಿಕೃತವಾದ ಯಾವೊಬ್ಬ ಅಧಿಕಾರಿಯು ಯಾವುದೇ ಕಟ್ಟಡ ಅಥವಾ ಭೂಮಿಯನ್ನು ರಾಜ್ಯ ಸರ್ಕಾರದ ಉದ್ದೇಶಗಳಿಗಾಗಿ ಬಳಸಲಾಗುತ್ತಿದೆಯೆಂದು ಮತ್ತು ವಾಸದ ವಾಣಿಜ್ಯ ಉದ್ದೇಶಗಳಿಗಾಗಿ ಬಳಸುತ್ತಿಲ್ಲವೆಂದು ಮತ್ತು ಬಳಸುವ ಉದ್ದೇಶವನ್ನು ಹೊಂದಿಲ್ಲವೆಂದು ನೀಡಿದ ಪ್ರಮಾಣ ಪತ್ರವು ಮುನ್ಸಿಪಲ್ ಪರಿಷತ್ತನ್ನು ಬದ್ಧವಾಗಿಸತಕ್ಕದ್ದು.

**XX XX XX**

**101. ಸ್ವತ್ತು ತೆರಿಗೆಯ ವಿವರಣೆ ಮತ್ತು ವರ್ಗ.- XX XX XX**

(2) ಸ್ವತ್ತು ತೆರಿಗೆಯನ್ನು,-

(ಎ) ವಾಣಿಜ್ಯ ಕಟ್ಟಡಗಳ ಸಂಬಂಧದಲ್ಲಿ ತೆರಿಗೆ ಗೆ ಗುರಿಯಾಗತಕ್ಕ ಕಟ್ಟಡದ ಮೂಲ ಬೆಲೆಯ ಶೇಕಡಾ 0.5ಕ್ಕಿಂತ ಒಂದು ಸಾವಿರಕ್ಕೆ ಐದು ರೂಪಾಯಿಗಳ ಕಡಿಮೆಯಿಲ್ಲದ ಶೇಕಡಾ ಮೂರಕ್ಕಿಂತ ಹೆಚ್ಚಿಲ್ಲದ ಶೇಕಡಾವಾರಿನಂತೆ

(ಬಿ) ವಾಸದ ಕಟ್ಟಡ ಮತ್ತು ವಾಣಿಜ್ಯೇತರ ಕಟ್ಟಡಗಳ ಸಂಬಂಧದಲ್ಲಿ ತೆರಿಗೆಗೆ ಗುರಿಯಾಗತಕ್ಕ, ಕಟ್ಟಡದ ಮೂಲ ಎಲೆಯು ಶೇಕಡಾ 0.2ಕ್ಕಿಂತ (ಒಂದು ಸಾವಿರಕ್ಕೆ ಎರಡು ರೂಪಾಯಿಗಳು, ಕಡಿಮೆಯಿಲ್ಲದ ಮತ್ತು ಶೇಕಡಾ 1.5ಕ್ಕಿಂತ ಒಂದು ಸಾವಿರಕ್ಕೆ ಹದಿನೈದು ರೂಪಾಯಿಗಳ ಹೆಚ್ಚಿಲ್ಲದಂಥ ಶೇಕಡಾವಾರಿನಂತೆ;

(ಸಿ) ಖಾಲಿ ಭೂಮಿಯ ಸಂಬಂಧದಲ್ಲಿ, ತೆರಿಗೆಗೆ ಗುರಿಯಾಗತಕ್ಕ ಭೂಮಿಯ ಮೂಲ ಬೆಲೆಯು ಶೇಕಡಾ 0.2ಕ್ಕಿಂತ (ಸಾವಿರಕ್ಕೆ ಎರಡು ರೂಪಾಯಿಗಳು, ಕಡಿಮೆಯಿಲ್ಲದ ಶೇಕಡಾ 0.5ಕ್ಕಿಂತ (ಸಾವಿರಕ್ಕೆ ಐದು ರೂಪಾಯಿಗಳು) ಹೆಚ್ಚಿಲದಂತೆ ಶೇಕಡಾವಾರಿನಂತೆ

**XX XX XX**

ಸರ್ಕಾರಿ ಮುದ್ರಣಾಲಯ, ಸುವರ್ಣ ವಿಧಾನಸೌಧ ಘಟಕ, ಬೆಳಗಾವಿ, ಪಿ7, ಕಾಸೂ , ಪ್ರತಿಗಳು 500, 14ನೇ ಡಿಸೆಂಬರ್ 2021

KARNATAKA LEGISLATIVE ASSEMBLY
FIFTEENTH LEGISLATIVE ASSEMBLY
ELEVENTH SESSION

# THE KARNATAKA MUNICIPAL CORPORATIONS AND CERTAIN OTHER LAW (SECOND AMENDMENT) BILL, 2021

**(LA Bill No. 41 of 2021)**

A Bill further to amend the Karnataka Municipal Corporations Act, 1976 and the Karnataka Municipalities Act, 1964.

Whereas it is expedient further to amend the Karnataka Municipal Corporations Act, 1976 (Karnataka Act 14 of 1977) and the Karnataka Municipalities Act, 1964 (Karnataka Act 22 of 1964) for the purposes hereinafter appearing;

Be it enacted by the Karnataka State Legislature in the seventy second year of the Republic of India as follows:-

**1. Short title and commencement.-** (1) This Act may be called the Karnataka Municipal Corporations and Certain other Law (Second Amendment) Act, 2021.

(2) It shall come into force at once.

**2. Amendment of the Karnataka Act 14 of 1977.-** In the Karnataka Municipal Corporations Act, 1976 (Karnataka Act 14 of 1977),-

(i) in section 108, in sub-section (2), after clause (c), the following shall be inserted, namely:-

"(d) industrial building at such percentage not being less than seventy percent of rate levied in case of commercial building in accordance with clause (a):

Provided that, the percentage so fixed shall not be less than the rate levied in case of residential buildings and buildings other than commercial in accordance with clause (b)."

(ii) in section 110, in sub-section (1),-

(a) in clause (j), after the word "commercial" the words "or industrial" shall be inserted.

(b) in the second proviso, after the word "commercial" the words "or industrial" shall be inserted.

**3. Amendment of the Karnataka Act 22 of 1964.-** In the Karnataka Municipalities Act, 1964 (Karnataka Act 22 of 1964),-

(i) in section 94, in sub-section (1-A),-

(a) in clause (j), after the word "commercial" the words "or industrial" shall be inserted; and

(b) in the second proviso, after the word "commercial" the words "or industrial" shall be inserted.

(ii) in section 101, in sub-section (2), after clause (c), the following shall be inserted, namely:-

"(d) industrial building at such percentage not being less than seventy percent of rate levied in case of commercial building in accordance with clause (a) of sub-section (2) of taxable capital value of the building:

Provided that, the percentage so fixed shall not be less than the rate levied in case of residential buildings and buildings other than commercial in accordance with clause (b)."

## STATEMENT OF OBJECTS AND REASONS

It is considered necessary to amend the Karnataka Municipal Corporations Act, 1976 (Karnataka Act 14 of 1977) and the Karnataka Municipalities Act, 1964 (Karnataka Act 22 of 1964) to give effect to the proposal made in the Budget Speech of 2021-22, to specify separate rate of property tax to be levied for industrial buildings in the Corporations and other urban local bodies, to encourage the establishment of industries in the State.

Hence, the Bill.

## FINANCIAL MEMORANDUM

Property tax demand will be slightly reduced which shall be compensated by generation of more employment opportunities and spurt in economic growth leading to increased income, thereby leading to higher property tax demand.

**B.A. BASAVARAJA**
Minister for Urban Development

**M.K. VISHALAKSHI**
Secretary (I/c)
Karnataka Legislative Assembly

## ANNEXURE

## THE EXTRACT FROM THE KARNATAKA MUNICIPAL CORPORATIONS ACT, 1976 (KARNATAKA ACT 14 OF 1977)

**X X XX XX**

**108. Description and class of property tax.- X X XX XX**

(2) The property tax shall be levied in case of,-

(a) commercial building at such percentage not being less than 0.5 per cent (rupees five per thousand) and not more than three percent of taxable capital value of the building;

(b) residential building and buildings other than commercial building, at such percentage not being less than 0.2 per cent (rupees two per thousand) and not more than 1.5 percent (rupees fifteen per thousand) of taxable capital value of the building;

(c) vacant land, at such percentage not being less than 0.2 percent (rupees two per thousand) and not more than 0.5 percent (rupees five per thousand) of taxable capital value of land.

**X X XX XX**

**110. General exemptions.-** (1) The following buildings and lands shall be exempted from the property tax:-

(a) places set apart for public worship and either actually so used or used for no other purposes;

(b) choultries for the occupation of which no rent is charged and choultries the rent charged for occupation of which is used exclusively for charitable purposes;

(c) places used for the charitable purpose of sheltering the destitute or animals and orphanages, homes and schools for the deaf and dumb, asylum for the aged and fallen women and such similar institutions run purely on philanthropic lines as are approved by Government;

(d) such ancient monuments protected under the Karnataka Ancient and Historical Monuments and Archaeological Sites and Remains Act, 1961 and the Ancient Monuments and Archaeological Sites and Remains Act, 1958 (Central Act 24 of 1958) or parts thereof as are not used as residential quarters or public offices;

(e) charitable hospitals and dispensaries but not including residential quarters attached thereto;

(f) such hospitals and dispensaries maintained by railway administrations as may from time to time be notified by Government, but not including residential quarters attached thereto;

(g) burial and cremation grounds included in the list published by the Commissioner under sub-section (3) of section 394;

(h) Government lands set apart for free recreational purposes and all such other Government land as may be notified by it, from which in the opinion of the Government no income could be derived;

(i) building or lands exclusively used for,-

(a) students hostels which are not established or conducted for profit;

(b) educational purposes by recognised educational institutions;

(c) the offices of Labour Associations registered under the Trade Union Act, 1926 and belonging to such Association;

(j) buildings or lands belonging to the Central Government or any State Government used for purposes of Government and not used or intended to be used for residential or commercial purposes;

(k) buildings or lands belonging to any Urban Development Authority constituted under the Karnataka Urban Development Authorities Act, 1987, the Bangalore Development Authority, the Bangalore Water Supply and Sewerage Board the Karnataka Housing Board or any local authority the possession of which has not been delivered to any person, in pursuance of any grant, allotment or lease;

(l) land which is registered as land used for agricultural purposes in the revenue accounts of Government and is actually used for the cultivation of crops:

Provided that nothing contained in clauses (a), (c) and (e) shall be deemed to exempt from property tax, any building or vacant land for which rent is payable by the person or person using the same for the purposes referred to in the said clauses:

Provided further that for purpose of clause (j), a certificate issued by Government or any officer duly authorised by Government that any building or vacant land is used for purposes of Government and not used or intended to be used for residential or commercial purposes shall be binding on the corporation.

**X X** **XX** **XX**

## THE EXTRACT FROM THE KARNATAKA MUNICIPALITIES ACT, 1964 (KARNATAKA ACT 22 OF 1964)

**X X XX XX**

**94. Taxes which may be imposed.- X X XX XX**

(1-A) The following buildings and vacant lands shall be exempted from the property tax, namely:-

(a) places set apart for public worship and either actually so used or used for no other purpose;

(b) choultries for occupation of which no rent is charged and choultries the rent charged for the occupation of which is used exclusively for charitable purpose;

(c) places used for the charitable purpose of sheltering the destitute or animals and orphanages, homes and schools for the deaf and dumb, asylum for the aged and fallen women and such similar institutions run purely on philanthropic lines as are approved by the State Government;

(d) such ancient monuments protected under the Karnataka Ancient and Historical Monuments and Archaeological Sites and Remains Act, 1961 (Karnataka Act 7 of 1962) and Ancient Monuments and Archaeological Sites and Remains Act, 1958 (Central Act 24 of 1958) or parts thereof as are not used as residential quarters or public offices;

(e) charitable hospitals and dispensaries but not including residential quarters attached thereto;

(f) such hospitals and dispensaries maintained by railway administration as may from time to time be notified by the State Government, but not including residential quarters attached thereto;

(g) burial and cremation grounds included in the list published by the Municipal Commissioner or Chief Officer;

(h) Government lands set apart for free recreational purposes and such other Government land as may be notified by the Government which in the opinion of the State Government no income could be derived;

(i) buildings or vacant lands exclusively used for,-

(ii) student hostels, which are not established or conducted for profit;

(iii) educational purposes by recognized educational institutions;

(j) buildings or vacant lands belonging to the Central Government or any State Government used for the purposes of Government and not used or intended to be used for residential or commercial purposes;

(k) buildings or vacant lands belonging to the Bangalore Development Authority, the Karnataka Housing Board, the Urban Development Authorities constituted under the Karnataka Urban Development Authorities Act, 1987 or any local authority, the possession of which has not been delivered to any person, in pursuance of any grant, allotment or lease;

(l) land which is registered as land used for agricultural purpose in the revenue accounts of State Government and is actually used for cultivation of crops;

Provided that nothing contained in clauses (a), (c) and (e) shall be deemed to exempt from property tax, any building or vacant land for which rent is payable by the person or persons using the same for the purposes referred to in the said clauses:

Provided further that for the purposes of clause (j), a certificate issued by the Government or any officer duly authorised by the Government that any building or land is used for the purposes of the State Government and not used or intended to be used for residential or commercial purposes shall be binding on the municipal council.

**XX XX XX**

**101. Description and class of property tax .- XX XX XX**

(2) The property tax shall be levied in case of,-

(a) commercial building at such percentage not being less than 0.5 percent (rupees five per thousand) not more than three percent of taxable capital value of the building.

(b) residential building and buildings other than commercial at such percentage not being less than 0.2 percent (rupees two per thousand) and not more than 1.5 percent (rupees fifteen per thousand) of taxable capital value of the building.

(c) vacant land at not less than 0.2 per cent (rupees two per thousand) not more than 0.5 percent (rupees five per thousand) of taxable capital value of land.

**X X XX XX**

Govt. Press, Suvarna Vidhana Soudha, Belagavi, 14th December, 2021, P7, W.D. , Copies 500